# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಸಿಸಿ. 2963/2021

| | |
|---|---|
| ಸಾಕ್ಷಿದಾರರ ಹೆಸರು | ಯಾಮಿನಿ |
| ತಂದೆಯ ಹೆಸರು | ಜವರಾಜ |
| ವಯಸ್ಸು | 35 ವರ್ಷ |
| ಉದ್ಯೋಗ | ಶಿಕ್ಷಕಿ |
| ವಾಸ | ರಾಜಾಜಿನಗರ, ಬೆಂಗಳೂರು. |
| ಪ್ರಮಾಣೀಕರಿಸಿದ ದಿನಾಂಕ | 31/05/2023 |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು ಕರ್ನಾಟಕ ಬ್ಯಾಂಕ್ ನಲ್ಲಿ ಓ.ಡಿ. ಖಾತೆಯನ್ನು ಹೊಂದಿರುತ್ತೇನೆ. ಅದರ ಸಂಖ್ಯೆ. 1257000300011501 ಆಗಿರುತ್ತದೆ. ನಮ್ಮ ತಂದೆ ನನ್ನ ಹೆಸರಿನಲ್ಲಿ ಸದರಿ ಖಾತೆಯಲ್ಲಿ ರೂ. 74,00,000/- ಇಟ್ಟಿದ್ದರು. ಪೊಲೀಸರು ನನಗೆ ನನ್ನ ಖಾತೆಯಲ್ಲಿರುವ ರೂ, 74,00,000/- ತೆಗೆದು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾನು ಪರಿಶೀಲಿಸಿದಾಗ ನನ್ನ ಖಾತೆಯಲ್ಲಿ ರೂ, 74,00,000/- ಇರುವುದು ಕಂಡು ಬಂದಿರುತ್ತದೆ. ನನ್ನ ಖಾತೆಯಲ್ಲಿ ಹಣವನ್ನು ಬಾಂಕ್ ನಿಂದ ಪಡೆಯುವಂತೆ ನಾನು ಯಾರಿಗೂ ಚೆಕ್ ಅಥವಾ ಯಾವುದೇ ದಾಖಲೆಗಳನ್ನು ಕೊಟ್ಟಿರುವುದಿಲ್ಲ. ನನಗೆ ಯಶಸ್ವಿನಿ ಎಂಬ ಸಹೋದರಿ ಹಾಗೂ ಮಿಥುನ ಎಂಬ ಸಹೋದರ ಇರುತ್ತಾರೆ. ನನ್ನ ಖಾತೆಯಿಂದ ತೆಗೆಯಲಾದ ಹಣ ಯಾರ ಖಾತೆಗೆ ಹೋಗಿತ್ತು ಎಂದು ನನಗೆ ಮಾಹಿತಿ ಇಲ್ಲ.

(ಈ ಹಂತದಲ್ಲಿ ಹಿ.ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿದಾರರ ಹೇಳಿಕೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲು : ಹಿ. ಸ. ಸ ಅಭಿಯೋಜಕರವರಿಂದ :**

ಈಗ ನನಗೆ ಒಂದು ದಾಖಲೆಯನ್ನು ತೋರಿಸಿದ್ದು, ಈ ದಾಖಲೆ ನಾನು ಪೊಲೀಸರಿಗೆ ಕೊಟ್ಟ ಉತ್ತರವಾಗಿರುತ್ತದೆ. ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸಿರುತ್ತೇನೆ. ಸದರಿ ದಾಖಲೆಗಳನ್ನು ನಿಪಿ-1 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈ ನ್ಯಾಯಾಲಯದ ಸಂಕೀರ್ಣದಲ್ಲಿ ರುವ ಕರ್ನಾಟಕ ಬ್ಯಾಂಕ್ ಶಾಖೆಲ್ಲಿ ಖಾತೆ ಇತ್ತು ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ದಿನಾಂಕ 20/11/2019 ರಂದು ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿ, ದಿನಾಂಕ 20/05/2017 ರಂದು ನನ್ನ ಖಾತೆಯಿಂದ ಮಂಜುನಾಥ ರವರ ಚಾಲ್ತಿ ಖಾತೆಗೆ ಚೆಕ್ ನಂ. 904898 ರ ಮೂಲಕ ರೂ. 50,00,000/-, ದಿನಾಂಕ 29/06/2017 ರಂದು 2 ನೇ ಆರೋಪಿ ಖಾತೆಗೆ ಚೆಕ್ ನಂ. 904892 ರ ಮೂಲಕ ರೂ, 20,00,000/- ಮತ್ತು ಕೃಷ್ಣಕುಮಾರ ಅವರ ಖಾತೆಗೆ ಚೆಕ್ ನಂ. 904893 ರ ಮೂಲಕ ರೂ, 4,00,000/- ವರ್ಗಾವಣೆಯಾಗಿರುತ್ತದೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಂತರ ದಿನಾಂಕ 04/12/2017 ರಂದು ಸದರಿ 20,00,000/- , 4,00,000/- ಮತ್ತು 50,00,000/- ಹಣ ಆರೋಪಿತರ ಖಾತೆಯಿಂದ ನನ್ನ ಖಾತೆಗೆ ಮರುವರ್ಗಾವಣೆ ಆಗಿರುತ್ತದೆ ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ತೋರಿಸಿ ಪ್ರಶ್ನಿಸಲಾದ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಬ್ಯಾಂಕ್ ಖಾತೆಯ ಎಕ್ಸಟ್ರಾಕ್ಟ ನ್ನು ತೋರಿಸಲಾಗಿ ಸದರಿ ಎಕ್ಸಟ್ರಾಕ್ಟ ತನ್ನ ಖಾತೆಗೆ ಸಂಬಂಧಪಟ್ಟಿದ್ದು ಎಂದು ಗುರುತಿಸಿದ್ದರಿಂದ, ಸದರಿ ಎಕ್ಸಟ್ರಾಕ್ಟ ನ್ನು ನಿಪಿ-3 ಎಂದು ಗುರುತಿಸಲಾಯಿತು. ದಿನಾಂಕ 20/05/2017 ರಂದು ನನ್ನ ಖಾತೆಯಿಂದ ಮಂಜುನಾಥ ರವರ ಚಾಲ್ತಿ

ಖಾತೆಗೆ ರೂ, 50,00,000/-, ದಿನಾಂಕ 29/06/2017 ರಂದು ನನ್ನ ಖಾತೆಯಿಂದ 2 ನೇ ಆರೋಪಿಯ ಚಾಲ್ತಿ ಖಾತೆಗೆ ರೂ, 20,00,000/- ಮತ್ತು ದಿನಾಂಕ 10/07/2017 ರಂದು ನನ್ನ ಖಾತೆಯಿಂದ ಕೃಷ್ಣಕುಮಾರ ಅವರ ಖಾತೆಗೆ ರೂ. 4,00,000/- ವರ್ಗಾವಣೆ ಆಗಿದೆ ಎಂದರೆ ಸರಿ. ದಿನಾಂಕ 04/12/2017 ರಂದು ಸದರಿ ರೂ, 20,00,000/-, ರೂ. 4,00,000/- ಮತ್ತು ರೂ. 50,00,000/- ಹಣ ನನ್ನ ಖಾತೆಗೆ ಕೋಕನಟ್ ಗ್ರೋ, ಕೃಷ್ಣಕುಮಾರ ಹಾಗೂ ಮಂಜುನಾಥ ರವರ ಖಾತೆಯಿಂದ ಜಮಾ ಆಗಿದೆ ಎಂದರೆ ಸರಿ. ನನ್ನ ಖಾತೆಯಿಂದ ರೂ. 72,00,000/- ವರ್ಗಾವಣೆಗೊಂಡು ಪುನಃ ನನ್ನ ಖಾತೆಗೆ ಜಮಾ ಆಗಿದೆ ಎಂದರೆ ಸರಿ. ಸದರಿ ವರ್ಗಾವಣೆ ಸಂಬಂಧ ನಾನು ಯಾವುದೇ ಚೆಕ್ ಗಳನ್ನು ಕೊಟ್ಟಿಲ್ಲ ಎಂದರೆ ಸರಿ. ಆರೋಪಿ ದೊರೆಸ್ವಾಮಿ ನನ್ನ ಖಾತೆಯಿಂದ ಹಣ ವರ್ಗಾಣೆ ಮಾಡಿರುತ್ತೇನೆ ಎಂದು ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು : ಶ್ರೀ. ಎಸ್.ಎಸ್. ವಕೀಲರಿಂದಃ**

ಈ ಪ್ರಕರಣದ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಖಾತೆಯಲ್ಲಿ ಯಾವ ರೀತಿ ಅವ್ಯವಹಾರ ಆಗಿದೆ ಎಂದು ಮೊದಲು ಗೊತ್ತಿರಲಿಲ್ಲ, ಪೊಲೀಸರಿಂದ ಗೊತ್ತಾಯಿತು. ನನಗೆ ಯಾವುದೇ ಹಣ ನಷ್ಟ ಆಗಿಲ್ಲ ಎಂದರೆ ಸರಿ. ನನ್ನ ಖಾತೆಯಿಂದ ಯಾರು ಹಣ ವರ್ಗಾವಣೆ ಮಾಡಿದ್ದಾರೆ ಎಂದು ನನಗೆ ಖುದ್ದಾಗಿ ಮಾಹಿತಿ ಇಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಈ ಹಿಂದೆ ನೋಡಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**